ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ

ಕಾವೇರಿ ಬಡಾವಣೆ, ನಿ.ಸಂ.05, ಬ್ಲಾಕ್ ನಂ.01, ಕುಶಾಲನಗರ – 571234

Email Id: kushalnagaradtp@hotmail.com ದೂರವಾಣಿ ಸಂ: 08276–274040

ಸಂಖ್ಯೆ:ಕುಯೋಪ್ರಾ/ಪ್ರಾ.ಸಭೆ/50/2022–23 ದಿನಾಂಕ:

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 15–07–2022 ರ ಶುಕ್ರವಾರದಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ 50ನೇ ಸಾಮಾನ್ಯ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು :–

1) ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2) ಸದಸ್ಯ ಕಾರ್ಯದರ್ಶಿ
3) ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
4) ಶ್ರೀ ಪಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
5) ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
6) ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು
7) ಮುಖ್ಯಾಧಿಕಾರಿಗಳು, ಪಟ್ಟಣಪಂಚಾಯಿತಿ, ಕುಶಾಲನಗರ

ಗೈರುಹಾಜರಾದವರು :–

1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಮುಳ್ಳುಸೋಗೆ ಗ್ರಾಮ ಪಂಚಾಯಿತಿ
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕೂಡುಮಂಗಳೂರು ಗ್ರಾಮ ಪಂಚಾಯಿತಿ
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ

ವಿಷಯ ಸಂಖ್ಯೆ:– 1):– ದಿನಾಂಕ: 05–05–2022ರಂದು ನಡೆದ 49ನೇ ಯೋಜನಾ ಪ್ರಾಧಿಕಾರದ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸಿರುವ ಬಗ್ಗೆ.

ಟಿಪ್ಪಣಿ : ದಿನಾಂಕ: 05–05–2022 ರಂದು ನಡೆದ 49ನೇ ಪ್ರಾಧಿಕಾರದ ಸಭೆಯ ನಡವಳಿಗಳನ್ನು ಓದಿ ಒಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ:– :– ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:– 2):– ಪ್ರಾಧಿಕಾರದ ಖಾತೆಗಳ ಏಪ್ರಿಲ್ 2022, ಮೇ 2022 ಮತ್ತು ಜೂನ್ 2022 ರ ಮಾಹೆಗಳ ಜಮಾ ಮತ್ತು ಖರ್ಚುಗಳ ವಿವರವನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ : ಪ್ರಾಧಿಕಾರದ ಖಾತೆಗಳ ಏಪ್ರಿಲ್ 2022, ಮೇ 2022 ಮತ್ತು ಜೂನ್ 2022 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದ್ದು, ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ

ನಿರ್ಣಯ:– ಪ್ರಾಧಿಕಾರದ ಖಾತೆಗಳ ಏಪ್ರಿಲ್ 2022, ಮೇ 2022 ಮತ್ತು ಜೂನ್ 2022 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ಪು.ತಿ.ನೋ

<u>ವಿಷಯ ಸಂಖ್ಯೆ: 03</u> – ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/5 ರಲ್ಲಿನ 0.33.55 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು:– ಶ್ರೀ ಜಿ.ಟಿ. ಬಸವರಾಜು ಬಿನ್ ಪೌತಿ ತಮ್ಮಯ್ಯ)**.

<u>ಟಿಪ್ಪಣಿ:</u> ವಿಷಯಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/5 ರಲ್ಲಿನ 0.33.55 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ:ಭೂಪರಿ/113/17–18 LAND10002157 ದಿನಾಂಕ: 17–03–2018 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದೆ ಹಾಗೂ ದಕ್ಷಿಣ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಉಪಗಮನ ಹೊಂದಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 1169.64 ಚ.ಮೀ (ಶೇ. 86.47%) ಮತ್ತು ಹಾಲಿ ಉಪಗಮನ ಕಲ್ಪಿಸುವ ರಸ್ತೆಯನ್ನು ಮುಂದುವರೆಸಲು ಅರ್ಜಿದಾರರ ಜಮೀನಿನಲ್ಲಿ ರಸ್ತೆಗಾಗಿ 182.92 ಚ.ಮೀ (ಶೇ. 13.53%) ವಿಸ್ತೀರ್ಣದ ಪ್ರದೇಶವನ್ನು ಮೀಸಲಿರಿಸಿ ಕರಡು ವಿನ್ಯಾಸ ನಕ್ಷೆ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಜಮೀನು ನದಿ ನೀರಿನಿಂದ ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದು ಗಮನದಲ್ಲಿದ್ದು ನಮಗೆ ಇದೊಂದೆ ನಿವೇಶನವಿದ್ದು ಕಟ್ಟಡ ಪರವಾನಿಗೆ ಸಂದರ್ಭ ವಿಧಿಸಲಾಗುವ ಷರತ್ತಿಗೆ ಬದ್ಧನಾಗಿರುವುದಾಗಿ ಮತ್ತು ಒಂದೊಮ್ಮೆ ನಿವೇಶನವನ್ನು ಮಾರಾಟ ಮಾಡುವ ಸಂದರ್ಭ ನಿವೇಶನವನ್ನು ಕೊಳ್ಳುವವರಿಗೆ ನಿವೇಶನವು ಜಲಾವೃತಗೊಳ್ಳುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುತ್ತೇನೆ ಹಾಗೂ ನದಿ ನೀರಿನಿಂದ ಜಲಾವೃತಗೊಳ್ಳುವ ಸಂದರ್ಭದಲ್ಲಾಗುವ ನಷ್ಟಗಳಿಗೆ ಪ್ರಾಧಿಕಾರವನ್ನು ಜವಾಬ್ದಾರಿಯನ್ನಾಗಿಸದೇ ಸಂಪೂರ್ಣವಾಗಿ ಜವಾಬ್ದಾರಿಯನ್ನು ವಹಿಸುವುದಾಗಿ ಪ್ರಮಾಣಪತ್ರ ಸಲ್ಲಿಸಿರುತ್ತಾರೆ. ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u> ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾ ಯೋಜನೆಯಲ್ಲಿ ವಸತಿ ವಲಯದಲ್ಲಿದೆ. ಸ್ಥಳಪರಿಶೀಲಿಸಲಾಗಿ ಪ್ರಸ್ತಾವಿತ ಜಮೀನು ದಕ್ಷಿಣ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಉಪಗಮನ ಹೊಂದಿದೆ. ಅರ್ಜಿದಾರರು ವಸತಿ ಉಪಯೋಗಕ್ಕಾಗಿ 1169.64 ಚ.ಮೀ (ಶೇ. 86.47%) ಮತ್ತು ಹಾಲಿ ಉಪಗಮನ ಕಲ್ಪಿಸುವ ರಸ್ತೆಯನ್ನು ಮುಂದುವರೆಸಲು ಅರ್ಜಿದಾರರ ಜಮೀನಿನಲ್ಲಿ ರಸ್ತೆಗಾಗಿ 182.92 ಚ.ಮೀ (ಶೇ. 13.53%) ವಿಸ್ತೀರ್ಣದ ಪ್ರದೇಶವನ್ನು ಮೀಸಲಿರಿಸಿ ಕರಡು ಏಕ–ನಿವೇಶನ ವಸತಿ ವಿನ್ಯಾಸ ನಕ್ಷೆ ಸಲ್ಲಿಸಿರುತ್ತಾರೆ. ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರು ಗುರುತಿಸಿ ನೀಡಿರುವ ನದಿ ನೀರಿನ ಜಲಾವೃತ ಪ್ರದೇಶ ನಕ್ಷೆಯಂತೆ ಪ್ರಸ್ತಾವಿತ ನಿವೇಶನವು ನದಿ ನೀರಿನಿಂದ ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದರಿಂದ ಮುಂದಿನ ದಿನಗಳಲ್ಲಿ ನಿವೇಶನವು ನದಿ ನೀರಿನಿಂದ ಜಲಾವೃತಗೊಂಡಲ್ಲಿ ನಿವೇಶನದಾರರಿಗೆ ಹಾನಿ ಉಂಟಾಗುವ ಸಂಭವವಿರುತ್ತದೆ. ಅಂತಿಮ ಮಹಾಯೋಜನೆ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ ನಕ್ಷೆಯಲ್ಲಿ ಜಲಾವೃತಗೊಳ್ಳುವ ಪ್ರದೇಶವನ್ನು ಗುರುತಿಸಿ ಸಲ್ಲಿಸಲಾಗಿರುತ್ತದೆ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಪ್ರವಾಹ ನಿರ್ವಹಣೆಗೆ ಸಂಬಂಧಿಸಿದಂತೆ ನೀಡಿರುವ ಮಾರ್ಗಸೂಚಿಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕಟ್ಟಡಗಳನ್ನು ನಿರ್ಮಿಸಲು ಅಳವಡಿಸಿಕೊಳ್ಳಲು ಸೂಚಿಸಿರುವ ನಿಯಮಗಳನ್ನು ವಲಯನಿಯಮಾವಳಿಯಲ್ಲಿ ಅಳವಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದ್ದು, ಟಿಪ್ಪಣಿಯಲ್ಲಿ ವಿವರಿಸಿದಂತೆ ಅರ್ಜಿದಾರರು ಪ್ರಮಾಣ ಪತ್ರ ಸಲ್ಲಿಸಿರುವುದರಿಂದ ಕಟ್ಟಡ ನಿರ್ಮಾಣ ಸಂದರ್ಭ ವಿಧಿಸಲಾಗುವ ಎಲ್ಲಾ ನಿಯಮಗಳಿಗೆ ಅರ್ಜಿದಾರರು/ನಿವೇಶನದ ಮಾಲೀಕರು ಬದ್ಧರಿರುವ ಷರತ್ತು ವಿಧಿಸಿ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಬಹುದಾಗಿದ್ದು ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಪ್ರಸ್ತಾವಿತ ನಿವೇಶನವು ನದಿ ನೀರಿನಿಂದ ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದರಿಂದ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರು ಜಮೀನಿನ ಸ್ಥಳಪರಿಶೀಲನೆಯನ್ನು ನಡೆಸಿದ ನಂತರ ಕಡತವನ್ನು ಮುಂದಿನ ಸಭೆಗೆ ಮಂಡಿಸುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ವಿಷಯ ಸಂಖ್ಯೆ: 04 – ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 27 ರಲ್ಲಿನ 3.86 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಪರಿಷ್ಕೃತ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು:–ಶ್ರೀಮತಿ ಗೌರಮ್ಮ ಎಂ.ಕೆ. ಕೋಂ ಎಂ.ಪಿ. ಕುಶಾಲಪ್ಪ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ ಜಮೀನಿನ ಪರಿಷ್ಕೃತ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ, ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುತ್ತಾ, ಪ್ರಾಧಿಕಾರದಿಂದ ಅನುಮೋದಿಸಿರುವ ವಿನ್ಯಾಸ ನಕ್ಷೆಯಲ್ಲಿ ನಿವೇಶನ ಸಂಖ್ಯೆ 52 ಮತ್ತು 53 ರ ಮಧ್ಯೆ ರಸ್ತೆಗಾಗಿ ಗುರುತಿಸಿದ್ದ ಜಾಗದಲ್ಲಿ ಕಣ್ತಪ್ಪಿನಿಂದ ನಿವೇಶನವನ್ನು ಅಭಿವೃದ್ಧಿಪಡಿಸಿರುವುದಾಗಿ ಅರ್ಜಿದಾರರು ತಿಳಿಸಿದ್ದು ಸದರಿ ರಸ್ತೆಗೆ ಬದಲಾಗಿ ನಿವೇಶನ ಸಂಖ್ಯೆ 51 ಅನ್ನು ರಸ್ತೆಗಾಗಿ ಅಭಿವೃದ್ಧಿಪಡಿಸಲಾಗಿದ್ದು, ತಪ್ಪನ್ನು ಮನ್ನಿಸಿ ಪರಿಷ್ಕೃತ ನಕ್ಷೆ ಅನುಮೋದಿಸಿ ಕೊಡುವಂತೆ ಹಾಗೂ ರಸ್ತೆ ವಿಸ್ತೀರ್ಣದಲ್ಲಿ ಹೆಚ್ಚುವರಿ ಭಾಗವನ್ನು ನಿಯಮಾನುಸಾರ ಹಸ್ತಾಂತರಿಸಲು ಬದ್ಧರಿರುವುದಾಗಿ ಅರ್ಜಿದಾರರು ತಿಳಿಸಿರುವುದರಿಂದ ಸದರಿ ಮನವಿಯನ್ನು ಅಂಗೀಕರಿಸಿ ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಗುಮ್ಮನಕೊಲ್ಲಿ ಗ್ರಾಮದ ಸರ್ವೆ ನಂ. 27 ರಲ್ಲಿನ 3.86 ಎಕರೆ ಜಮೀನು ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನ ಪತ್ರ ಸಂ: ಭೂಪರಿ/15 2014–15 ದಿನಾಂಕ: 26–02–2015 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತನೆಗೊಂಡಿದ್ದು, ಸದರಿ ಜಮೀನಿನಲ್ಲಿ ವಸತಿಗಾಗಿ 8589.83 ಚ.ಮೀ (ಶೇ. 54.99), ನಾಗರೀಕ ಸೌಲಭ್ಯಕ್ಕಾಗಿ 783.39 ಚ.ಮೀ (ಶೇ. 05.02), ಉದ್ಯಾನವನಕ್ಕಾಗಿ 1703.15 ಚ.ಮೀ (ಶೇ. 10.90), ರಸ್ತೆಗಾಗಿ 4544.35 ಚ.ಮೀ (ಶೇ.29.09) ಕಾಯ್ದಿರಿಸಿ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಈ ಕಛೇರಿ ಆದೇಶ ಪತ್ರ ಸಂ: ಕುಯೋಪ್ರಾ/ಸಕಾ/ಸೋ.ತಾ/ಗುಮ್ಮನಕೊಲ್ಲಿ ಗ್ರಾಮ/ವಿ.ಅ/03/2015–16/136 ದಿನಾಂಕ: 21–07–2015 ರಲ್ಲಿ ಅನುಮೋದನೆ ನೀಡಿದ್ದು, ತದನಂತರ ಮೊದಲನೇ ಹಂತದ ಶೇಕಡಾ 40 ರಷ್ಟು ನಿವೇಶನಗಳನ್ನು ಈಗಾಗಲೇ ದಿನಾಂಕ: 26–08–2015 ರಲ್ಲಿ ಬಿಡುಗಡೆಗೊಳಿಸಲಾಗಿದೆ. ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ನಿವೇಶನ ಸಂಖ್ಯೆ 52 ಮತ್ತ 53 ರ ಮಧ್ಯದಲ್ಲಿ 9.0ಮೀ ಅಗಲದ ರಸ್ತೆಯನ್ನು ಗುರುತಿಸಲಾಗಿದೆ ಹಾಗೂ ನಿವೇಶನ ಸಂಖ್ಯೆ 51 ಅನ್ನು ಅನಿಯತ ಗುರುತಿಸಲಾಗಿದೆ. ಅರ್ಜಿದಾರರು ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸುವ ಸಂದರ್ಭ ಕಣ್ತಪ್ಪಿನಿಂದ ನಿವೇಶನ ಸಂಖ್ಯೆ 52 ಮತ್ತು 53 ರ ಮಧ್ಯೆ ರಸ್ತೆಗಾಗಿ ಗುರುತಿಸಿದ್ದ ಜಾಗದಲ್ಲಿ ನಿವೇಶನವನ್ನು ಅಭಿವೃದ್ಧಿಪಡಿಸಿದ್ದು, ನಿವೇಶನ ಸಂಖ್ಯೆ 51 ಅನ್ನು ರಸ್ತೆಗಾಗಿ ಅಭಿವೃದ್ಧಿಪಡಿಸಲಾಗಿದೆ ಎಂಬುದಾಗಿ ತಿಳಿಸಿರುತ್ತಾರೆ. ಜಮೀನಿನಲ್ಲಿ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಕರ್ನಾಟಕ ನಗರ ನೀರು ಸರಬಾರಾಜು ಹಾಗೂ ಒಳಚರಂಡಿ ಮಂಡಳಿ, ತೋಟಗಾರಿಕೆ ಇಲಾಖೆ, ಚೆಸ್ಕಾಂ, ಲೋಕೋಪಯೋಗಿ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪಡೆದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯನ್ನು ಪರಿಶೀಲಿಸಲಾಗಿ, ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 8587.79 ಚ.ಮೀ (ಶೇ.54.98%), ನಾಗರೀಕ ಸೌಲಭ್ಯಕ್ಕಾಗಿ 783.39 ಚ.ಮೀ (ಶೇ.5.02%), ಉದ್ಯಾನವನಗಳು

ಮತ್ತು ಆಟದ ಮೈದಾನಕ್ಕಾಗಿ 1703.15 ಚ.ಮೀ (ಶೇ.10.90%) ಹಾಗೂ ರಸ್ತೆಗಾಗಿ 4546.39 ಚ.ಮೀ (ಶೇ.29.10%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಲಾಗಿದೆ. ನಿವೇಶನ ಸಂಖ್ಯೆ 51 ಮತ್ತು 53 ಕ್ಕೆ ನಮೂನೆ 9/11ಎ ನೀಡಿರುವುದಿಲ್ಲ ಎಂಬುದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ದೃಢೀಕರಣ ಪತ್ರ ಸಲ್ಲಿಸಿರುತ್ತಾರೆ. ವಿಷಯನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ: ಅರ್ಜಿದಾರರು ಸಲ್ಲಿಸಿರುವ ಪರಿಷ್ಕೃತ ಕರಡು ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 8587.79 ಚ.ಮೀ (ಶೇ.54.98%), ನಾಗರೀಕ ಸೌಲಭ್ಯಕ್ಕಾಗಿ 783.39 ಚ.ಮೀ (ಶೇ.5.02%), ಉದ್ಯಾನವನಗಳು ಮತ್ತು ಆಟದ ಮೈದಾನಕ್ಕಾಗಿ 1703.15 ಚ.ಮೀ (ಶೇ.10.90%) ಹಾಗೂ ರಸ್ತೆಗಾಗಿ 4546.39 ಚ.ಮೀ (ಶೇ.29.10%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಲಾಗಿದ್ದು, ಪ್ರಸ್ತಾವಿತ ಜಮೀನಿನ ಸ್ಥಳವನ್ನು ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಪರಿಶೀಲಿಸಲಾಗಿ, ವಾಸ್ತವವಾಗಿ ದಿನಾಂಕ: 21–07–2015 ರಂದು ಈ ಕಛೇರಿಯಿಂದ ಅನುಮೋದಿಸಿರುವ ವಿನ್ಯಾಸ ನಕ್ಷೆಯಲ್ಲಿನ ನಿವೇಶನ ಸಂಖ್ಯೆ 52 ಮತ್ತು 53 ರ ಮಧ್ಯದಲ್ಲಿ ಗುರುತಿಸಿರುವ ರಸ್ತೆಯ ಬದಲಾಗಿ ನಿವೇಶನವನ್ನು ಹಾಗೂ ನಿವೇಶನ ಸಂಖ್ಯೆ 51 ಅನ್ನು ಸ್ಥಳದಲ್ಲಿ ರಸ್ತೆಯಾಗಿ ಅಭಿವೃದ್ಧಿಪಡಿಸಿರುವುದು ಕಂಡುಬಂದಿದೆ. ಪ್ರಸ್ತಾವನೆಯಲ್ಲಿ ಅಭಿವೃದ್ಧಿಪಡಿಸಲಾಗಿರುವುದಾಗಿ ವಿವರಿಸಿರುವ ರಸ್ತೆಯು ಬಡಾವಣೆಯ ಪಶ್ಚಿಮ ದಿಕ್ಕಿನಲ್ಲಿರುವ ಸರ್ವೆ ನಂಬರ್ 89 ರಲ್ಲಿರುವ ಅಭಿವೃದ್ಧಿಹೊಂದಿದ ಪ್ರದೇಶಕ್ಕೆ ನೇರ ಸಂಪರ್ಕ ಕಲ್ಪಿಸುವುದು ಹಾಗೂ ಅಭಿವೃದ್ಧಿಪಡಿಸಿರುವ ರಸ್ತೆಯ ಪಂಕ್ತಿಕರಣಕ್ಕೆ ಸರಿಯಾಗಿ ಸರ್ವೆ ನಂಬರ್ 89 ರ ಜಮೀನಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತು ಒಳಚರಂಡಿ ಮಂಡಳಿ ಇವರು UGD Line ಸಂಪರ್ಕ ವ್ಯವಸ್ಥೆ ಮಾಡಿದ್ದು, ಅಭಿವೃದ್ಧಿಪಡಿಸಿರುವ ಹಾಲಿ ರಸ್ತೆಯನ್ನು ಮುಂದುವರಿಸಿದಲ್ಲಿ ಸಾರ್ವಜನಿಕರಿಗೆ ಉಪಯೋಗವಾಗಿ ರಾಜ್ಯ ಹೆದ್ದಾರಿ–91 ರಸ್ತೆಗೆ ಹತ್ತಿರದಿಂದ ಸಂಪರ್ಕ ಕಲ್ಪಿಸಿದಂತಾಗುವುದು ಸ್ಥಳಪರಿಶೀಲನೆ ಸಂದರ್ಭ ಕಂಡುಬಂದಿದೆ. ಈ ಕಛೇರಿಯಿಂದ ಈ ಹಿಂದೆ ನಿವೇಶನ ಸಂಖ್ಯೆ 51 ಅನ್ನು ಬಿಡುಗಡೆಗೊಳಿಸಿರುವುದಿಲ್ಲ ಹಾಗೂ ನಿವೇಶನ ಸಂಖ್ಯೆ 51 ಮತ್ತು 53 ಕ್ಕೆ ಗ್ರಾಮಪಂಚಾಯಿತಿಯಿಂದ ನಮೂನೆ 9/11ಎ ನೀಡಿರುವುದಿಲ್ಲ ಎಂಬುದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ದೃಢೀಕರಣ ನೀಡಿರುವುದರಿಂದ ಪರಿಷ್ಕೃತ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು ವಿಷಯನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಈ ಹಿಂದೆ ಪ್ರಾಧಿಕಾರದಿಂದ ದಿನಾಂಕ: 21–07–2015 ರಂದು ಅನುಮೋದಿಸಿದ ವಿನ್ಯಾಸ ನಕ್ಷೆ ಹಾಗೂ ಅರ್ಜಿದಾರರು ಸಲ್ಲಿಸಿರುವ ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯನ್ನು ಸಭೆಯು ಪರಿಶೀಲಿಸಿತು. ಈ ಹಿಂದೆ ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ನಿ.ಸಂ. 52 ಮತ್ತು 53 ರ ಮಧ್ಯದಲ್ಲಿ ಗುರುತಿಸಿರುವ ರಸ್ತೆ ಬದಲಾಗಿ ನಿವೇಶನವನ್ನು ಹಾಗೂ ನಿ.ಸಂ. 51 ಅನ್ನು ವಾಸ್ತವಾಗಿ ಸ್ಥಳದಲ್ಲಿ ರಸ್ತೆಯಾಗಿ ಈಗಾಗಲೇ ಅಭಿವೃದ್ಧಿಪಡಿಸಿರುವುದರಿಂದ ಸದರಿ ರಸ್ತೆಯು ಬಡಾವಣೆಯ ಪಶ್ಚಿಮ ದಿಕ್ಕಿನಲ್ಲಿರುವ ಸರ್ವೆ ನಂ. 89 ರಲ್ಲಿ ಅಭಿವೃದ್ಧಿಹೊಂದಿದ ಪ್ರದೇಶದಿಂದ ರಾಜ್ಯ ಹೆದ್ದಾರಿಗೆ ನೇರ ಸಂಪರ್ಕ ಕಲ್ಪಿಸುವುದು ಹಾಗೂ ಸ.ನಂ. 89 ರ ಜಮೀನಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು UGD Line ಸ್ಥಾಪಿಸಿರುವುದರಿಂದ ಅರ್ಜಿದಾರರು ಈಗಾಗಲೇ ಅಭಿವೃದ್ಧಿಪಡಿಸಿರುವ ರಸ್ತೆಯಿಂದ ಸಾರ್ವಜನಿಕರಿಗೆ ಉಪಯೋಗವಾಗುವುದರಿಂದ ಮತ್ತು ನಿವೇಶನ ಸಂಖ್ಯೆ 51 ಅನ್ನು ಈ ಕಛೇರಿಯಿಂದ ಈ ಹಿಂದೆ ಬಿಡುಗಡೆಗೊಳಿಸದೆ ಇರುವುದರಿಂದ ಹಾಗೂ ನಿ.ಸಂ 51 ಮತ್ತು 53 ಕ್ಕೆ ಗ್ರಾಮಪಂಚಾಯಿತಿಯಿಂದ ನಮೂನೆ 9/11ಎ ನೀಡಿರುವುದಿಲ್ಲ ಎಂಬುದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ದೃಢೀಕರಣ ಪತ್ರ ನೀಡಿರುವುದರಿಂದ ಅರ್ಜಿದಾರರು ವಸತಿ ಉಪಯೋಗಕ್ಕಾಗಿ 8587.79 ಚ.ಮೀ (ಶೇ.54.98%), ನಾಗರೀಕ ಸೌಲಭ್ಯಕ್ಕಾಗಿ 783.39 ಚ.ಮೀ (ಶೇ.5.02%), ಉದ್ಯಾನವನಗಳು ಮತ್ತು ಆಟದ ಮೈದಾನಕ್ಕಾಗಿ 1703.15 ಚ.ಮೀ (ಶೇ.10.90%) ಹಾಗೂ ರಸ್ತೆಗಾಗಿ 4546.39 ಚ.ಮೀ (ಶೇ.29.10%) ವಿಸ್ತೀರ್ಣ ಮೀಸಲಿರಿಸಿ ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ದಿನಾಂಕ: 21–07–2015 ರಂದು ಅನುಮೋದಿಸಿದ್ದ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ

ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ಈಗಾಗಲೇ ಅಭಿವೃದ್ಧಿಕಾರ್ಯಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿರುವುದರಿಂದ ರಸ್ತೆಗಾಗಿ ಮೀಸಲಿರಿಸಿದ ಹೆಚ್ಚುವರಿ ವಿಸ್ತೀರ್ಣವನ್ನು ನಿಯಮಾನುಸಾರ ಗ್ರಾಮಪಂಚಾಯಿತಿಗೆ ಹಸ್ತಾಂತರಿಸಿದ ನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2–ಬಿ) ರನ್ವಯ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲು ಹಾಗೂ ಬಾಕಿ ಉಳಿದಿರುವ ಎಲ್ಲ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

<u>ವಿಷಯ ಸಂಖ್ಯೆ: 05–</u> ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:–

<u>(ಅ)</u> – ಅಧ್ಯಕ್ಷರು ಮಾತನಾಡಿ ಯೋಜನಾ ಪ್ರಾಧಿಕಾರದ ಹಿಂದಿನ ಸಭೆಗಳಲ್ಲಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ತಾವರೆಕೆರೆ ಹಾಗೂ ಸೋಮೇಶ್ವರ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು ತದನಂತರ ಸರ್ವೆ ಕಾರ್ಯ ನಡೆಸಿ ಒತ್ತುವರಿ ಇಲ್ಲದೆ ಇರುವ ಬಗ್ಗೆ ಖಾತರಿಪಡಿಸಿಕೊಳ್ಳಲಾಗಿತ್ತು ಪ್ರಸ್ತುತ ಕಡತವು ಯಾವ ಹಂತದಲ್ಲಿ ಇದೆ ಎಂಬುದಾಗಿ ಸದಸ್ಯ ಕಾರ್ಯದರ್ಶಿಯವರನ್ನು ವಿಚಾರಿಸಿದರು, ಸುತ್ತೋಲೆಯಲ್ಲಿನ ನಿಯಮಾನುಸಾರ ಕೆರೆಯನ್ನು ಅಭಿವೃದ್ಧಿಪಡಿಸುವ ಪೂರ್ವಭಾವಿಯಾಗಿ ಕೆರೆ ಮಾಲೀಕತ್ವಕ್ಕೆ ಸಂಬಂಧಿಸಿದ ಇಲಾಖೆಯಿಂದ ಪೂರ್ವಾನುಮತಿ ಪಡೆಯಬೇಕಿದ್ದು ಆ ಪ್ರಕಾರ ಆರ್.ಟಿ.ಸಿ ಯಲ್ಲಿ ಸರ್ಕಾರ ಎಂಬುದಾಗಿ ಇರುವುದರಿಂದ ಹಿಂದಿನ ಸಭೆಯ ನಿರ್ಣಯದಂತೆ ಕಂದಾಯ ಇಲಾಖೆಗೆ ಪತ್ರ ಬರೆದು ಪೂರ್ವಾನುಮತಿ ನೀಡಲು ಕ್ರಮವಹಿಸಲು ಕೋರಲಾಗಿದ್ದು ಸದರಿಯವರು ಈ ಬಗ್ಗೆ ಮುಂದಿನ ಕ್ರಮವಹಿಸುವಂತೆ ಪಟ್ಟಣ ಪಂಚಾಯಿತಿಗೆ ಪತ್ರ ಬರೆದಿರುವುದಾಗಿ ತಿಳಿದುಬಂದಿದೆ ಎಂಬುದಾಗಿ ಸದಸ್ಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ಈ ಬಗ್ಗೆ ಮುಖ್ಯಾಧಿಕಾರಿಯವರನ್ನು ಸಭೆಯು ವಿಚಾರಿಸಲಾಗಿ ಪ್ರಸ್ತುತ ಸದರಿ ಎರಡು ಕೆರೆಗಳು ಪಟ್ಟಣ ಪಂಚಾಯಿತಿಗೆ ಕಂದಾಯ ಇಲಾಖೆಯಿಂದ ಹಸ್ತಾಂತರಗೊಂಡಿರುವುದಿಲ್ಲ ಹಾಗಾಗಿ ಈ ಬಗ್ಗೆ ಪಟ್ಟಣ ಪಂಚಾಯಿತಿ ಕೌನ್ಸಿಲ್ ಸಭೆಯಲ್ಲಿ ವಿಷಯವನ್ನು ಮಂಡಿಸಿ ಮುಂದಿನ ಕ್ರಮಕೈಗೊಳ್ಳುವುದಾಗಿ ಮುಖ್ಯಾಧಿಕಾರಿಯವರು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ವಿಸ್ತೃತವಾದ ಚರ್ಚೆ ನಡೆದು ತಾವರೆಕೆರೆ ಹಾಗೂ ಸೋಮೇಶ್ವರ ಕೆರೆಗಳ ಅಭಿವೃದ್ಧಿಪಡಿಸುವ ಸಂಬಂಧ ಸರ್ಕಾರದ ಸುತ್ತೋಲೆಗಳಲ್ಲಿನ ಅಂಶಗಳಿಗೆ ಅನುಗುಣವಾಗಿ ವಿಸ್ತೃತ ಯೋಜನಾ ವರದಿ (DPR) ಅನ್ನು ಸಿದ್ಧಪಡಿಸಿ ನೀಡುವಂತೆ ಸಣ್ಣ ನೀರಾವರಿ ಇಲಾಖೆ ಇವರಿಗೆ ಪತ್ರ ಬರೆಯುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

<u>(ಆ)</u> – ಪಟ್ಟಣ ಪಂಚಾಯಿತಿ ನಾಮನಿರ್ದೇಶನ ಸದಸ್ಯರಾದ ಶ್ರೀ ಬಿ. ಅಮೃತ್‌ರಾಜ್ ಇವರು ಮಾತಾನಾಡಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿ, ಬೈಚನಹಳ್ಳಿ ಗ್ರಾಮ ಸ.ನಂ. 115/1 ಮತ್ತು 145 ರಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಬಡಾವಣೆ ಬಗ್ಗೆ ಪ್ರಾಧಿಕಾರದ ಹಿಂದಿನ ಸಭೆಯಲ್ಲಿ ಕ್ರಮಕೈಗೊಳ್ಳುವ ಬಗ್ಗೆ ನಿರ್ಣಯಿಸಲಾಗಿದ್ದು ಯಾವ ಕ್ರಮಕೈಗೊಳ್ಳಲಾಗಿದೆ ಎಂಬುದಾಗಿ ಸದಸ್ಯ ಕಾರ್ಯದರ್ಶಿಯವರನ್ನು ವಿಚಾರಿಸಿದರು. ಸಭೆಯ ನಿರ್ಣಯದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕಲಂ 15(4), 17(4) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ ನಿಯಮ 37(2) ರನ್ವಯ ಬಡಾವಣೆ ಮಾಲೀಕರಿಗೆ ನೋಟೀಸು ಜಾರಿ ಮಾಡಲಾಗಿದೆ ಹಾಗೂ ಸಭೆಯ ನಿರ್ಣಯದನ್ವಯ ಈ ಹಿಂದೆ ನೋಟೀಸು ನೀಡಿದ್ದರು ಸಹ ಕರ್ನಾಟಕ ಪುರಸಭೆ ಕಾಯ್ದೆ 1964 ರನ್ವಯ ಕ್ರಮವಹಿಸದಿರುವ ಬಗ್ಗೆ ವಿವರಣೆ ನೀಡುವಂತೆ ಮುಖ್ಯಾಧಿಕಾರಿಗಳಿಗೆ ಹಾಗೂ ಅನಧಿಕೃತ ಬಡಾವಣೆಯಲ್ಲಿನ ನಿವೇಶನವನ್ನು ನೊಂದಾಯಿಸದಂತೆ ಸೂಚಿಸಿದ್ದರು ನೊಂದಾಯಿಸಿರುವ ಬಗ್ಗೆ ವಿವರಣೆಯನ್ನು ಸಲ್ಲಿಸುವಂತೆ ಉಪನೊಂದಾಣಾಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಜಮೀನಿನ ಮಾಲೀಕರು ನೀಡುವ ಹೇಳಿಕೆಯನ್ನು ಪರಿಶೀಲಿಸಿ ವಿಚಾರಣೆ ನಡೆಸಿ ಮುಂದಿನ ಕ್ರಮಕೈಗೊಳ್ಳುವ ಬಗ್ಗೆ ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ ನಿಯಮ 37(3) ರನ್ವಯ ಅಧ್ಯಕ್ಷರನ್ನು ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರನ್ನು

ಒಳಗೊಂಡಂತೆ ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ ಮತ್ತು ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಬಡಾವಣೆ ಮಾಲೀಕರ ಹೇಳಿಕೆಯ ಪರಿಶೀಲನೆಗಾಗಿ ದಿನಾಂಕ ನಿಗಧಿಪಡಿಸಲು ಕೋರಿ ಕಡತವನ್ನು ಪ್ರಾಧಿಕಾರದ ಅಧ್ಯಕ್ಷರಿಗೆ ಈಗಾಗಲೇ ಮಂಡಿಸಿರುವುದಾಗಿ ಸದಸ್ಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಕೂಲಂಕುಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು, ಪರಿಶೀಲನೆಗಾಗಿ ನಿಯಮಾನುಸಾರ ಈಗಾಗಲೇ ಸಮಿತಿಯನ್ನು ರಚಿಸಿರುವುದರಿಂದ ಸದರಿ ಸಮಿತಿಯಲ್ಲಿ ಪರಿಶೀಲನೆ ನಡೆಸಲು ಸಧ್ಯದಲ್ಲಿಯೇ ದಿನಾಂಕವನ್ನು ನಿಗಧಿಪಡಿಸಲಾಗುವುದು ಎಂಬುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.

ಚರ್ಚೆ ಮುಂದುವರೆದು, ಶ್ರೀ ಬಿ. ಅಮೃತ್‌ರಾಜ್ ಸದಸ್ಯರು ಪಟ್ಟಣ ಪಂಚಾಯಿತಿ ಕುಶಾಲನಗರ ಇವರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಪತ್ರವನ್ನು ಸಭೆಯಲ್ಲಿ ಯಥಾವತ್ ಓದಲಾಯಿತು. ಸದರಿಯವರು ಪತ್ರದಲ್ಲಿ ಸ.ನಂ. 115/1 ಮತ್ತು 145 ರಲ್ಲಿ ಬಿ.ಎಂ. ರಸ್ತೆಯಲ್ಲಿ ಎರಡು ಕಟ್ಟಡಗಳು ತಲೆಎತ್ತಿದ್ದು ಒಂದರಲ್ಲಿ ರಿಲಯನ್ಸ್ ಡಿಜಿಟಲ್ ಮತ್ತು ಇನ್ನೊಂದರಲ್ಲಿ ಕೆಲವು ಅಂಗಡಿಗಳು ತೆರೆದಿದ್ದು ಈ ಕಟ್ಟಡಗಳಿಗೆ ಯಾವುದೇ ಪರವಾನಗಿ ಇಲ್ಲದೆ ಇರುವುದು ಕಂಡುಬಂದಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಕಡತ ಪರಿಶೀಲಿಸಲಾಗಿ ಜಮೀನಿನ ಮೂಲ ಮಾಲೀಕರ ಹೆಸರಿಗೆ ತಳಅಂತಸ್ತು+ನೆಲ+ಮೊದಲನೆ+ಎರಡನೇ ಅಂತಸ್ತಿನ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆಗೆ ಈ ಕಛೇರಿಯಿಂದ ತಾಂತ್ರಿಕ ಅಭಿಪ್ರಾಯವನ್ನು ಪಟ್ಟಣ ಪಂಚಾಯಿತಿಗೆ ನೀಡಿರುವುದನ್ನು ಸಭೆಯು ಗಮನಿಸಿತು. ಶ್ರೀ ಅಮೃತ್‌ರಾಜ್ ರವರು ಮಾತಾನಾಡಿ ಕಟ್ಟಡ ಪರವಾನಿಗೆಯನ್ನು ಸ್ಥಳೀಯ ಸಂಸ್ಥೆಯಿಂದ ನಿವೇಶನ ಮೂಲ ಮಾಲೀಕರಾದ ಶ್ರೀ ಟಿ. ವಿಜಯನ್ ಸಂದೀಪ್ ರವರು ಪಡೆದಿದ್ದು ಸದರಿಯವರು ಕಟ್ಟಡ ನಿರ್ಮಾಣ ಪ್ರಾರಂಭಿಸಿ ನಿವೇಶನವನ್ನು ಪ್ರಸ್ತುತ ಮಾಲೀಕರಾದ ಶ್ರೀ ಟಿ.ಕೆ. ಮುಹಮ್ಮದ್ ಅಸ್ಲಾಂ ಬಿನ್ ಪಿ.ಸಿ. ಮೂಸ ಮತ್ತು ಎಂ.ಎ. ಹನೀಫ್ ಬಿನ್ ಪೌತಿ ಅಬೂಬಕರ್ ಹಾಗೂ ಶ್ರೀ ಟಿ.ಕೆ. ಖಲೀಲ ಬಿನ್ ಅಬ್ದುಲ್ ಮತ್ತು ಸಿರಾಜುದ್ದಿನ್ ಟಿ.ಕೆ ಬಿನ್ ಅಬ್ದುಲ್ ಇವರಿಗೆ ಮಾರಾಟ ಮಾಡಿದ್ದು, ಕ್ರಯಸಾಧನ ಪತ್ರದಲ್ಲಿ ಖಾಲಿ ನಿವೇಶನ ಎಂಬುದಾಗಿ ನಮೂದಿಸಿರುತ್ತಾರೆ, ಪಟ್ಟಣ ಪಂಚಾಯಿತಿಯಿಂದ ನೀಡಿರುವ ನಮೂನೆ–3 ರಲ್ಲಿ ಕಟ್ಟಡ ಇರುವ ಬಗ್ಗೆ ನಮೂದು ಇದೆ ಹಾಗಾಗಿ ಮೂಲ ಮಾಲೀಕರು ಮತ್ತು ಖರೀದಿದಾರರು ಕ್ರಯಸಾಧನ ಪತ್ರ ಮಾಡುವಾಗ ಸರಿಯಾದ ಮಾಹಿತಿಯನ್ನು ನೋಂದಣಾ ಇಲಾಖೆಗೆ ನೀಡಿರುವುದಿಲ್ಲ ಇದರಿಂದ ಸರ್ಕಾರಕ್ಕೆ ನಷ್ಟ ಉಂಟಾಗಿದೆ ಎಂಬುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಿದ ಸಭೆಯು ದಾಖಲೆಯನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಉಪನೊಂದಣಾಧಿಕಾರಿಗಳು ಕುಶಾಲನಗರ ಇವರಿಗೆ ಪತ್ರ ಬರೆಯುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ಸದರಿ ಕಟ್ಟಡಕ್ಕೆ ಹಾಲಿ ಮಾಲೀಕರ ಹೆಸರಿನಲ್ಲಿ ಪರವಾನಿಗೆ ಇಲ್ಲದೆ ಇರುವುದರಿಂದ ಕಟ್ಟಡದಲ್ಲಿ ಸ್ಥಾಪಿಸಲಾಗುವ ಅಂಗಡಿಗಳಿಗೆ ಟ್ರೇಡ್ ಲೈಸೆನ್ಸ್ ನೀಡದಂತೆ ಶ್ರೀ ಅಮೃತ್‌ರಾಜ್ ಇವರು ಸಭೆಗೆ ತಿಳಿಸಿದರು. ಸದಸ್ಯ ಕಾರ್ಯದರ್ಶಿಯವರು ಟ್ರೇಡ್ ಲೈಸೆನ್ಸ್ ನೀಡುವ ಪ್ರಕ್ರಿಯೆಯು ಯೋಜನಾ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ ಸದರಿ ವಿಷಯವು ಪಟ್ಟಣ ಪಂಚಾಯಿತಿಗೆ ಸಂಬಂಧಿಸಿರುತ್ತದೆ ಎಂಬುದಾಗಿ ತಿಳಿಸಿದರು. ಮುಖ್ಯಾಧಿಕಾರಿಗಳು ಮಾತಾನಾಡಿ ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು. ಸ.ನಂ. 115/1 ಮತ್ತು 145 ರ ಜಮೀನು ಈಗಾಗಲೇ 1972ನೇ ಇಸವಿಯಲ್ಲಿ ಭೂಪರಿವರ್ತನೆಗೊಂಡಿದ್ದು ವಿನ್ಯಾಸ ಅನುಮೋದನೆ ಪಡೆಯದೇ ಪರಭಾರೆ ಮಾಡಿರುವ ನಿವೇಶನವು ಅನಧಿಕೃತ ನಿವೇಶನವಾಗುತ್ತದೆ ಹಾಗಾಗಿ ನಿವೇಶನಕ್ಕೆ ಬಡಾವಣೆ ನಕ್ಷೆ ಅನುಮೋದನೆ ಪಡೆಯದೇ ಇದ್ದರೂ ಸಹ 1976ರ ಪೂರ್ವದಲ್ಲಿ ಸ್ಥಳೀಯ ಸಂಸ್ಥೆಯಲ್ಲಿ ಖಾತೆಯಾಗಿರುವುದಾಗಿ ಕಟ್ಟಡ ಪರವಾನಿಗೆ ನೀಡಲು ತಾಂತ್ರಿಕ ಅಭಿಪ್ರಾಯ ನೀಡಿರುವುದು ಕಾನೂನು ಬಾಹಿರ ಹಾಗಾಗಿ ಹಿಂದಿನ ಅಧಿಕಾರಿ ಮತ್ತು ಸಿಬ್ಬಂದಿಯ ಮೇಲೆ ಕ್ರಮಜರುಗಿಸುವಂತೆ ನಾಮನಿರ್ದೇಶಿತ ಸದಸ್ಯರು ಸಭೆಯಲ್ಲಿ ಆಗ್ರಹಿಸಿದರು. ಪಟ್ಟಣ ಪಂಚಾಯಿತಿಯಿಂದ ನೋಟಿಫೈಡ್ ಏರಿಯಾದಲ್ಲಿ ನಿವೇಶನ ಇದ್ದು 1976 ನೇ ಇಸವಿ ಪೂರ್ವದಲ್ಲಿ ಖಾತೆ

ದಾಖಲಾಗಿರುವುದಾಗಿ ದೃಢೀಕರಣವನ್ನು ಸ್ಥಳೀಯ ಸಂಸ್ಥೆಯಿಂದ ನೀಡಿರುವುದಾಗಿ ಪ್ರಾಧಿಕಾರದ ತಾಂತ್ರಿಕ ಸಿಬ್ಬಂದಿ ಕಡತ ಮಂಡಿಸಿರುವುದರ ಮೇರೆಗೆ ಕಟ್ಟಡ ಪರವಾನಿಗೆಗೆ ಹಿಂದಿನ ಸದಸ್ಯಕಾರ್ಯದರ್ಶಿಯವರು ತಾಂತ್ರಿಕ ಅಭಿಪ್ರಾಯ ನೀಡಿರುವುದು ಕಂಡುಬಂದಿದ್ದು ಸದರಿ ಅಧಿಕಾರಿ ಹಾಗೂ ಸಿಬ್ಬಂದಿಯ ಮೇಲೆ ಕ್ರಮ ಜರುಗಿಸುವ ಅಧಿಕಾರ ತಮಗೆ ಇರುವುದಿಲ್ಲ ಎಂಬುದಾಗಿ ಸಭೆಗೆ ಸದಸ್ಯಕಾರ್ಯದರ್ಶಿಯವರು ತಿಳಿಸಿದರು.

(ಇ) – ಪಟ್ಟಣ ಪಂಚಾಯಿತಿ ನಾಮನಿರ್ದೇಶಿತ ಸದಸ್ಯರಾದ ಶ್ರೀ ಬಿ. ಅಮೃತ್‌ರಾಜ್ ರವರು ಮಾತಾನಾಡಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, ಬೈಚನಹಳ್ಳಿ ಗ್ರಾಮ, ಸ.ನಂ. 145 ಮತ್ತು 115 ರಲ್ಲಿ ಆರ್.ಟಿ.ಸಿ/ನಮೂನೆ–3 ರಲ್ಲಿ ನಮೂದು ಇರುವ ವಿಸ್ತೀರ್ಣಕ್ಕಿಂತ ಹೆಚ್ಚುವರಿ ವಿಸ್ತೀರ್ಣದ ಜಮೀನು ಇರುವ ಬಗ್ಗೆ ಹಾಗೂ ಸದರಿ ಹೆಚ್ಚುವರಿ ವಿಸ್ತೀರ್ಣದ ಜಮೀನು ದುರುಪಯೋಗವಾಗುತ್ತಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿರುವುದಾಗಿ ಹೆಚ್ಚುವರಿ ವಿಸ್ತೀರ್ಣದ ಬಗ್ಗೆ ಅನುಮಾನ ವ್ಯಕ್ತಪಡಿಸಿದರು ಮತ್ತು ಈ ಬಗ್ಗೆ ಇತರೇ ಸದಸ್ಯರು ದನಿಗೂಡಿಸಿದರು ಹಾಗೂ ಸದಸ್ಯ ಕಾರ್ಯದರ್ಶಿಯವರಲ್ಲಿ ವಿಸ್ತೀರ್ಣದ ಬಗ್ಗೆ ಮಾಹಿತಿ ಕೇಳಿದರು. ಸದಸ್ಯ ಕಾರ್ಯದರ್ಶಿಯವರು ಮಾತಾನಾಡಿ ಜಮೀನಿನ ವಿಸ್ತೀರ್ಣದ ಬಗ್ಗೆ ಈ ಕಛೇರಿಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಸದರಿ ವಿಷಯವು ಈ ಕಛೇರಿಯ ಕಾರ್ಯವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ ಎಂಬುದಾಗಿ ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ವಿಸ್ತೀರ್ಣ ಹೆಚ್ಚು ಇದ್ದಲ್ಲಿ ದುರ್ಬಳಕೆ ಆಗುವುದನ್ನು ತಪ್ಪಿಸುವ ಸಲುವಾಗಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ 1ನೇ ಬ್ಲಾಕಿನ ಸ.ನಂ. 115 ಮತ್ತು 145 ರ ಜಮೀನನ್ನು ಸರ್ವೆ ಮಾಡಿ ಹೆಚ್ಚುವರಿ ವಿಸ್ತೀರ್ಣ ಇದ್ದಲ್ಲಿ ಜಮೀನನ್ನು ಗುರುತಿಸಿ ಮಾಹಿತಿ ನೀಡುವಂತೆ ಕೋರಿ ಭೂದಾಖಲೆಗಳ ಸಹಾಯಕ ನಿದೇರ್ಶಕರು, ಸೋಮವಾರಪೇಟೆ ಇವರಿಗೆ ಪತ್ರ ಬರೆಯುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

(ಈ) – ಶ್ರೀ ಎಂ.ಕೆ. ಧನರಾಜು, ಶ್ರೀ ಎಂ.ಬಿ. ಸುರೇಶ್ ಮತ್ತು ಇತರರು ಇವರು ಅರ್ಜಿ ಸಲ್ಲಿಸಿ ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಮುಳ್ಳುಸೋಗೆ ಗ್ರಾಮ ಸ.ನಂ. 80 ಮತ್ತು 81 ಜಾಗವನ್ನು ಕೆಂಪು ಬಣ್ಣದಿಂದ ಗುರುತಿಸಿದ್ದು ಸದರಿ ಜಮೀನು ನಮ್ಮ ಸ್ವಾಧೀನದಲ್ಲಿರುವ ಬಗ್ಗೆ ಮತ್ತು ನ್ಯಾಯಾಲಯದಲ್ಲಿ ನಮ್ಮ ಪರವಾಗಿ ತೀರ್ಮ ನೀಡಿದ್ದರ ಬಗ್ಗೆ ಎಲ್ಲಾ ಆದೇಶಗಳು ಮತ್ತು ಮೂಲ ದಾಖಲೆಗಳನ್ನು ನೀಡಿದ್ದರು ಮಹಾಯೋಜನೆ ನಕ್ಷೆಯಲ್ಲಿ ತಿದ್ದುಪಡಿ ಮಾಡದೆ ಹಾಗೆ ಬಿಟ್ಟಿರುವ ಕಾರಣ ತಿಳಿಸುವ ಹಿಂಬರಹ ನೀಡುವಂತೆ ಹಾಗೂ ಮಹಾಯೋಜನೆ ನಕ್ಷೆಯಲ್ಲಿ ತಿದ್ದುಪಡಿ ಮಾಡದೆ ಹಾಗೆ ಬಿಟ್ಟಿರುವುದರ ಕಾರಣ ಮತ್ತು ಇದುವರೆಗೂ ಸದರಿಯವರ ಅರ್ಜಿಗೆ ಸೂಕ್ತ ತಿದ್ದುಪಡಿ ಮಾಡುವ ಬಗ್ಗೆ ಯಾವುದೇ ಭರವಸೆ ನೀಡದಿರುವುದರಿಂದ ಉಚ್ಚನ್ಯಾಯಾಲಯಕ್ಕೆ ನ್ಯಾಯಾಂಗ ಉಲ್ಲಂಘನೆ ಅರ್ಜಿ ಸಲ್ಲಿಸಬೇಕಾಗಿರುವುದರಿಂದ ಹಿಂಬರಹ ನೀಡಬೇಕಾಗಿ ಕೋರಿರುವ ಪತ್ರದ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಸದರಿ ಅರ್ಜಿದಾರರು ಮಹಾಯೋಜನೆ ತಾತ್ಕಾಲಿಕ ನಕ್ಷೆಗೆ ದಿನಾಂಕ: 03–02–2015 ರಂದು ಸಲ್ಲಿಸಿರುವ ಆಕ್ಷೇಪಣಾ ಅರ್ಜಿ ಹಾಗೂ ದಾಖಲೆಗಳನ್ನು ಪರಿಶೀಲಿಸಿತು. ಸದರಿಯವರ ಆಕ್ಷೇಪಣೆ ಬಗ್ಗೆ ಈಗಾಗಲೇ ದಿನಾಂಕ: 18–05–2017 ರಂದು ಪ್ರಾಧಿಕಾರದ ಸಭೆಗೆ ಕ್ರಮ ಸಂಖ್ಯೆ 7 ರಲ್ಲಿ ವಿಷಯವನ್ನು ಚರ್ಚಿಸಲಾಗಿದ್ದು ಪರಿಶೀಲಿಸಲಾಗಿ ಆಕ್ಷೇಪಣೆ ಪಟ್ಟಿಯಲ್ಲಿ ಸದರಿ ಜಮೀನು ಅರ್ಜಿದಾರರ ಹೆಸರಿನಲ್ಲಿ ಆರ್.ಟಿ.ಸಿ ಮತ್ತು ಎಂ.ಸಿ ದಾಖಲಾಗಿರುವುದರಿಂದ ಅರ್ಧಭಾಗವನ್ನು ವಾಣಿಜ್ಯ ಮತ್ತು ಅರ್ಧಭಾಗವನ್ನು ವಸತಿಗೆ ಬದಲಾಯಿಸಬೇಕೆಂದು ಕೋರಿರುವ ಬಗ್ಗೆ ನಮೂದಿಸಲಾಗಿದೆ. ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಸ್ಥಳವು ಸಾರ್ವಜನಿಕ ಮತು ಅರೆಸಾರ್ವಜನಿಕ ಉದ್ದೇಶಕ್ಕೆ ನಿಗಧಿಯಾಗಿದ್ದು ಜಮೀನು ಹಾಲಿ ಪೋಲೀಸ್ ಇಲಾಖೆಯ ಸ್ವಾಧೀನದಲ್ಲಿ ಇರುತ್ತದೆ ಆದ್ದರಿಂದ ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂಬುದಾಗಿ ಅಂದಿನ ಸದಸ್ಯಕಾರ್ಯದರ್ಶಿಯವರು ತಮ್ಮ ಅಭಿಪ್ರಾಯ ದಾಖಲಿಸಿರುತ್ತಾರೆ. ಈ ಬಗ್ಗೆ ಚರ್ಚಿಸಿದ ಅಂದಿನ ಪ್ರಾಧಿಕಾರವು ದಾಖಲಾತಿಗಳನ್ನು ಪರಿಶೀಲಿಸಿ

ನಂತರ ಅರ್ಜಿದಾರರ ಆಕ್ಷೇಪಣೆಯನ್ನು ಮರುಪರಿಶೀಲಿಸಲು ನಿರ್ಧರಿಸಿ ನಿರ್ಣಯಿಸಿರುವುದು ಕಂಡುಬಂದಿದೆ. ಆದರೆ ತದನಂತರ ಅಂದಿನ ಪ್ರಾಧಿಕಾರವು ಮರುಪರಿಶೀಲನೆ ಬಗ್ಗೆ ಕ್ರಮವಹಿಸಿರುವುದು ಕಂಡುಬಂದಿರುವುದಿಲ್ಲ ಹಾಗಾಗಿ ವಿಷಯವನ್ನು ಪುನರ್ ಪರಿಶೀಲಿಸಲು ದಿನಾಂಕ: 24–12–2021 ರಂದು ಸಭೆಗೆ ಮಂಡಿಸಲಾಗಿದ್ದು, ತಾತ್ಕಾಲಿಕ ಮಹಾಯೋಜನೆಯಲ್ಲಿ ಜಮೀನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ (Police Parade Ground) ಉದ್ದೇಶದಲ್ಲಿ ಇರುವುದು ಕಂಡುಬಂದಿದ್ದರಿಂದ ಸದರಿ ಜಮೀನು ಪೋಲೀಸ್ ಇಲಾಖೆಗೆ ಸಂಬಂಧಿಸಿದಲ್ಲಿ ಈ ಬಗ್ಗೆ ದಾಖಲೆ ನೀಡುವಂತೆ ಕೋರಿ ಕುಶಾಲನಗರ ಪೋಲೀಸ್ ಠಾಣೆಗೆ ಪತ್ರ ಬರೆದಿದ್ದು, ಠಾಣೆಯಲ್ಲಿ ಪತ್ರ ಪರಿಶೀಲಿಸಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಇರುವುದರಿಂದ ಈ ಕಛೇರಿಯ ಪತ್ರ ಸ್ವೀಕರಿಸಲು ಸಾಧ್ಯವಿರುವುದಿಲ್ಲ ಎಂಬುದಾಗಿ ಮೌಖಿಕವಾಗಿ ತಿಳಿಸಿ ಈ ಕಛೇರಿಯ ಸಿಬ್ಬಂದಿಯೊಂದಿಗೆ ಪತ್ರವನ್ನು ವಾಪಾಸ್ಸು ನೀಡಿರುತ್ತಾರೆ ಆದರೆ ಮಹಾಯೋಜನೆ (ಅಂತಿಮ) ನಕ್ಷೆಯನ್ನು ಜರೂರಾಗಿ ಸರ್ಕಾರಕ್ಕೆ ಶೀಘ್ರವಾಗಿ ಸಲ್ಲಿಸಬೇಕಿರುವುದರಿಂದ ಕುಶಾಲನಗರ ಪೋಲೀಸ್ ಠಾಣೆಗೆ ಮತ್ತೊಮ್ಮೆ ಪತ್ರ ಬರೆದು Speed post ಮುಖಾಂತರ ರವಾನಿಸಿದ್ದರೂ ಸಹ ಸದರಿಯವರು ಯಾವುದೇ ಪ್ರತಿಕ್ರಿಯೆಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ ಎಂಬ ವಿಷಯವನ್ನು ಈ ಹಿಂದೆ ಸಭೆಯ ಗಮನಕ್ಕೆ ತರಲಾಗಿತ್ತು. ಈ ಬಗ್ಗೆ ಚರ್ಚಿಸಿದ ಸಭೆಯು ಜಮೀನು ಈಗಾಗಲೇ Police Parade Ground ಆಗಿ ಉಪಯೋಗಿಸುತ್ತಿರುವುದಾಗಿ ಹಾಗೂ ಈಗಾಗಲೇ ಸದರಿ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ಪೋಲೀಸ್ ಇಲಾಖೆ ಹಾಗೂ ಆಕ್ಷೇಪಣೆದಾರರ ಮಧ್ಯೆ ವ್ಯಾಜ್ಯ ಇರುವುದಾಗಿ ಸದಸ್ಯರುಗಳು ಸಭೆಗೆ ತಿಳಿಸಿದ್ದು ವಿಷಯದ ಬಗ್ಗೆ ಸುದೀರ್ಘವಾದ ಚರ್ಚೆ ನಡೆದು ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸ.ನ. 80, 80/1, ಮತ್ತು 81 ಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಮಹಾಯೋಜನೆಯಲ್ಲಿ ಅಳವಡಿಸಿರುವ ಭೂ–ಉಪಯೋಗವನ್ನು ಅಂತಿಮ ಮಹಾಯೋಜನೆಯಲ್ಲಿ ಮುಂದುವರೆಸುವುದೆಂದು ಸರ್ವಾನುಮತದಿಂದ ನಿರ್ಣಯಿಸಲಾಗಿತ್ತು ಹಾಗಾಗಿ ಸದರಿ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ ಎಂಬುದಾಗಿ ಸಭೆಗೆ ಸದಸ್ಯಕಾರ್ಯದರ್ಶಿಯವರು ತಿಳಿಸಿದರು. ಸಭೆಯಲ್ಲಿ ವಿಷಯದ ಬಗ್ಗೆ ವಿಸ್ತೃತ ಚರ್ಚೆ ನಡೆದು ಅಧ್ಯಕ್ಷರು ಮಾತಾನಾಡಿ ಇತ್ತೀಚಿಗೆ ಮತ್ತೊಮ್ಮೆ ಪತ್ರಿಕೆ ಪ್ರಕಟಣೆ ನೀಡಿ ಸಾರ್ವಜನಿಕರು ಸಲಹೆ/ಆಕ್ಷೇಪಣೆ ನೀಡುವಂತೆ ಹೊರಡಿಸಿದ್ದ ಪ್ರಕಟಣೆಗೆ ಸಂಬಂಧಿಸಿದಂತೆ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಿರುವ ಬಗ್ಗೆ ಪರಿಶೀಲಿಸುವಂತೆ ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿದರು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 5 ರನ್ವಯ ದಿನಾಂಕವನ್ನು ಅಧಿಸೂಚಿಸಿಕೊಂಡು ಹಾಲಿ ಭೂಬಳಕೆ–2010 ನಕ್ಷೆಯನ್ನು ಸಿದ್ಧಪಡಿಸಲಾಗಿದ್ದು ಸದರಿ ನಕ್ಷೆಯಲ್ಲಿನ ಭೂಬಳಕೆಗೆ ಸಂಬಂಧಿಸಿದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ(6) ರನ್ವಯ ದಿನಾಂಕ: 17–08–2021 ರಂದು ಸಾರ್ವಜನಿಕ ಆಕ್ಷೇಪಣೆ ಆಹ್ವಾನಿಸಿ 30 ದಿನಗಳ ಕಾಲಾವಕಾಶ ನೀಡಲಾಗಿತ್ತು ಸದರಿ ನಿಗಧಿತ ಅವಧಿಯೊಳಗೆ ಹಾಲಿ ಭೂಬಳಕೆ–2010 ನಕ್ಷೆಯಲ್ಲಿನ ಭೂಉಪಯೋಗಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಿರುವುದಿಲ್ಲ ಎಂಬುದಾಗಿ ಸದಸ್ಯಕಾರ್ಯದರ್ಶಿಯವರು ತಿಳಿಸಿದರು. ಹಾಲಿ ಭೂ ಬಳಕೆ–2010 ನಕ್ಷೆಯಲ್ಲಿ ಸ.ನಂ. 80 ಮತ್ತು 81 ರಲ್ಲಿ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉದ್ದೇಶಕ್ಕೆ ಭೂ ಉಪಯೋಗವನ್ನು ನಮೂದಿಸಲಾಗಿದ್ದು ತದನಂತರ ಪ್ರಸ್ತಾವಿತ ಭೂ–ಉಪಯೋಗ ನಕ್ಷೆಯಲ್ಲಿಯೂ ಸಹ ಅದೇ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಮತ್ತು ಪ್ರಕರಣವು ನ್ಯಾಯಾಲಯದಲ್ಲಿರುವುದಾಗಿ ಸದಸ್ಯರುಗಳು ದಿನಾಂಕ: 24–12–2021 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಹಾಗೂ ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಇರುವುದು ಕಂಡುಬಂದಿರುವುದರಿಂದ ಹಿಂದಿನ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಮತ್ತು ಪೋಲೀಸ್ ಇಲಾಖೆಗೆ ಸಂಬಂಧಿಸಿದ ಧ್ವಜಹಾರಿಸುವ ಕಟ್ಟೆ ಇತ್ಯಾದಿಗಳು ಜಮೀನಿನಲ್ಲಿ ಪ್ರಸ್ತುತ ಇರುವುದರಿಂದ ಹಾಗೂ ಯೋಜನಾ ದೃಷ್ಟಿಯಿಂದ ಸ.ನಂ. 80 ಮತ್ತು 81 ಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಮಹಾಯೋಜನೆಯಲ್ಲಿ ಅಳವಡಿಸಿರುವ ಭೂ–ಉಪಯೋಗವನ್ನು ಅಂತಿಮ ಮಹಾಯೋಜನೆಯಲ್ಲಿ ಅಳವಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂಬುದಾಗಿ ಹಿಂಬರಹ ನೀಡುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

(ಱ) – ಜಮೀನು ನೋಟಿಫೈಡ್ ಏರಿಯಾದಲ್ಲಿ ಇದ್ದರೂ ಸಹ 1976ನೇ ಇಸವಿ ಪೂರ್ವದಲ್ಲಿ ಜಮೀನನ್ನು ಭೂ–ಪರಿವರ್ತಿಸಿಕೊಂಡು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೆ ಭೂ–ಪರಿವರ್ತಿತ ಒಟ್ಟು ವಿಸ್ತೀರ್ಣಕ್ಕೆ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದು ತದನಂತರದಲ್ಲಿ ಜಮೀನಿನ ಮಾಲೀಕರು ಭೂ–ಪರಿವರ್ತಿತ ಜಮೀನನ್ನು ತುಂಡುತುಂಡಾಗಿ ವಿಭಜಿಸಿ ಪರಭಾರೆ ಮಾಡಿರುವ ನಿವೇಶನಗಳಿಗೆ ಸ್ಥಳೀಯ ಸಂಸ್ಥೆಯು ತುಂಡು ನಿವೇಶನಕ್ಕೆ ಖಾತೆ ನೀಡಿದ್ದು ಇಂತಹ ನಿವೇಶನಗಳಲ್ಲಿ ಕಟ್ಟಡ ಪರವಾನಿಗೆ ನೀಡಲು ಯಾವ ರೀತಿ ಕ್ರಮಜರುಗಿಸಲಾಗುತ್ತದೆ ಎಂಬುದಾಗಿ ಸದಸ್ಯರು ಸಭೆಯಲ್ಲಿ ಕೇಳಿದರು. ಮಾನ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಸುತ್ತೋಲೆ ಸಂ: ನಗ್ರಾಯೋನಿ:ಕಟ್ಟಡ ಪರವಾನಿಗೆ:ಸುತ್ತೋಲೆ:2017–16 ದಿನಾಂಕ: 04–05–2017 ರಲ್ಲಿ ಗ್ರಾಮಠಾಣಾ ವ್ಯಾಪ್ತಿಯಲ್ಲಿನ ನಿವೇಶನಗಳಿಗೆ ಹಾಗೂ ಕರ್ನಾಟಕ ಪೌರಕಾಯ್ದೆ, 1964ರ ಕಲಂ 387 ದಿನಾಂಕ: 08–12–1976 ರಿಂದ ಜಾರಿಯಲ್ಲಿದ್ದು, ಸದರಿ ದಿನಾಂಕ: 08–12–1976ರ ಪೂರ್ವದಲ್ಲಿ ಭೂ–ಪರಿವರ್ತನೆಯಾದ ಜಮೀನುಗಳಲ್ಲಿ ಸ್ಥಳೀಯ ಸಂಸ್ಥೆಯಿಂದ ಖಾತೆ ತೆರೆದಿರುವ ನಿವೇಶನಗಳಿಗೆ ಕಟ್ಟಡ ಪರವಾನಿಗೆ ನೀಡುವ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಲು ಸೂಚಿಸಲಾಗಿರುತ್ತದೆ ಎಂಬುದಾಗಿ ಸದಸ್ಯಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ಈ ಬಗ್ಗೆ ಚರ್ಚೆ ನಡೆದು ಸರ್ಕಾರದ ಸುತ್ತೋಲೆ: ನಅಇ 7 ಟಿಟಿಪಿ 2017 ದಿನಾಂಕ: 22–03–2017 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆ ನೀಡಬಾರದೆಂದು ಸೂಚಿಸಲಾಗಿದೆ ಹಾಗಾಗಿ ದಿನಾಂಕ: 04–05–2017ರ ಸುತ್ತೋಲೆಯಲ್ಲಿ ಭೂ–ಪರಿವರ್ತನಾ ಆದೇಶದಲ್ಲಿನ ಒಟ್ಟು ವಿಸ್ತೀರ್ಣಕ್ಕೆ ಸ್ಥಳೀಯ ಸಂಸ್ಥೆಯಿಂದ ಖಾತೆ ತೆರೆದಿರುವ ನಿವೇಶನಕ್ಕೆ ಮಾತ್ರ ಕಟ್ಟಡ ಪರವಾನಿಗೆಗೆ ತಾಂತ್ರಿಕ ಅಭಿಪ್ರಾಯ ನೀಡಬೇಕೋ ಅಥವಾ ವಿನ್ಯಾಸ ಅನುಮೋದನೆ ಪಡೆಯದೆ ಭೂ–ಪರಿವರ್ತಿತ ವಿಸ್ತೀರ್ಣದಿಂದ ತುಂಡುತುಂಡು ನಿವೇಶನವಾಗಿ ವಿಂಗಡಿಸಿ ಪರಭಾರೆ ಮಾಡಿ ತುಂಡು ವಿಸ್ತೀರ್ಣಕ್ಕೂ ಖಾತೆ ನೀಡಿರುವ ನಿವೇಶನಕ್ಕೂ ಸಹ ಕಟ್ಟಡ ಪರವಾನಿಗೆಗೆ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ ಎಂಬುದಾಗಿ ಸದಸ್ಯರು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ಕೋರಿ ಮಾನ್ಯ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರಿಗೆ ಪತ್ರ ಬರೆಯುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ